ಅಸಲು ದಾವಾ ನಂ. 298/2023 ಪಿ .ಡಬ್ಲ್ಯೂಃ2– ಶಿವರಾಜ ನಿಂಗಪ್ಪ ಹುಲ್ಲೂರ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16/06/2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ – ವಾದಿ ಪರ ಶ್ರೀ GBH ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿ ಪರ ಸಾಕ್ಷಿ ಇರುತ್ತೇನೆ. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನಾನು ಸದರಿ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಮಾಹಿತಿಯನ್ನು ತಿಳಿದುಕೊಂಡು ಸದರಿ ಪ್ರಮಾಣ ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ.

ವಾದಿಯ ದಾವೆಯನ್ನು ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ವಿಡಿಪಿ ರವರಿಂದಃ**

ಈ ದಿನ ನನ್ನನ್ನು ನ್ಯಾಯಾಲಯಕ್ಕೆ 3 ನೇ ವಾದಿಯಾದ ರಾಮಪ್ಪರವರು ಕರೆದುಕೊಂಡು ಬಂದಿರುತ್ತಾರೆ. ನನಗೆ ಸಾಕ್ಷಿ ಹೇಳಲು ನ್ಯಾಯಾಲಯದಿಂದ ಯಾವುದೇ ನೋಟಿಸ ಬಂದಿರುವುದಿಲ್ಲ. ವಾದಿ ನಂ.1 ರಿಂದ 3 ಮತ್ತು 2 ನೇ ಪ್ರತಿವಾದಿಯವರ ತಂದೆಯವರು ಜೀವಂತವಿದ್ದಾಗಲೇ ದಾವಾ ಆಸ್ತಿಯಲ್ಲಿ ಪಾಲು ವಿಭಾಗವಾಗಿರುತ್ತದೆ ಎಂದರೆ ಸರಿ. ಅಂದಿನಿಂದಲೇ ಅವರವರಿಗೆ ಬಂದಂತಹ ಆಸ್ತಿಯಲ್ಲಿ ಉಪಭೋಗ ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಯವರು ವಾದಿಯವರ ಹಿಸ್ಸಾಕ್ಕೆ ಬಂದಂತಹ ಆಸ್ತಿಗೆ ಎಂದಿಗೂ ಸಹ ಅಡ್ಡಿಪಡಿಸಿರುಎವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯವರು ಬಹಳಷ್ಟು ವರ್ಷಗಳಿಂದ ತನ್ನ ಹೆಂಡತಿ ಮಕ್ಕಳ ಜೊತೆಗೆ ಬದಾಮಿ ತಾಲೂಕಿನ ಅನಂತಗೇರಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ವಾದಿಯವರ ಪಾಲಿಗೆ ಬಂದಂತಹ ಆಸ್ತಿಯ ಸರ್ವೆ ನಂಬರ ನನಗೆ ತಿಳಿದಿರುತ್ತದೆ . ಸಾಕ್ಷಿಯು ವಾದಿಯವರಿಗೆ ಬಂದಂತಹ ಸರ್ವೆ ನಂಬರಗಳ ಪೈಕಿ ಊರಿನ ಹತ್ತಿರ ಇರುವ ಜಮೀನಿನ ಸರ್ವೆ ನಂ.3 ವಿಸ್ತೀರ್ಣ 1 ಎಕರೆ 21 ಗುಂಟೆ , ಸರ್ವೆ ನಂ.49 ವಿಸ್ತೀರ್ಣ 1 ಎಕರೆ 6 ಗುಂಟೆ ಮತ್ತು ಸರ್ವೆ ನಂ.40 3 ಎಕರೆ 35 ಗುಂಟೆ ಇರುತ್ತದೆ. ನಾನು ಹೇಳಿದ ಸರ್ವೆ ನಂಬರ ತಪ್ಪಾಗಿರುತ್ತದೆ ಆದರೂ ಸಹ ನ್ಯಾಯಾಲಯಕ್ಕೆ ತಪ್ಪು ಮಾಹಿತಿಯನ್ನು ನೀಡುತ್ತಿದ್ದೇನೆ ಎಂದರೆ ಸಾಕ್ಷಿಯು ನನಗೆ ಸರ್ವೆ ನಂಬರ ಗೊತ್ತಿರುತ್ತದೆ. ಆದರೆ ಅದರ ಹಿಸ್ಸಾ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳು ಅಬ್ಬಿಗೇರಿ ಗ್ರಾಮದಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಹಿರೇಮಣ್ಣೂರಿನಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು ಸರ್ವೆನಂ.40 ಹುಲ್ಲೂರ ಹದ್ದಿನಲ್ಲಿ ಇರುತ್ತದೆ ಇನ್ನುಳಿದ ಆಸ್ತಿ ಹಿರೇಮಣ್ಣೂರು ಹತ್ತಿರ ಇರುತ್ತದೆ ಎಂದು ನುಡಿದಿರುತ್ತಾರೆ. ನಾನು ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ವಾದಿಯವರಿಗೆ ಅಬ್ಬಿಗೇರಿ ಗ್ರಾಮದಲ್ಲಿ ಮತ್ತು ಹಿರೇಮಣ್ಣೂರಿನಲ್ಲಿ ಹಿತ್ತಲು ಜಾಗ ಮತ್ತು ಮನೆಗಳು ಇರುತ್ತವೆ ಎಂದರೆಸ ಸಾಕ್ಷಿಯು ಅಬ್ಬಿಗೇರಿ ಗ್ರಾಮದಲ್ಲಿ

ನನಗೆ ಗೊತ್ತಿಲ್ಲ ಆದರೆ ಹಿರೇಮಣ್ಣೂರಿನಲ್ಲಿ ಮನೆ ಮತ್ತು ಜಾಗ ಇರುತ್ತದೆ ಎಂದು ನುಡಿದಿರುತ್ತಾರೆ. ಅಬ್ಬಿಗೇರಿ ಗ್ರಾಮದಲ್ಲಿ 1299/ಎ ಆಸ್ತಿ ಇರುವುದು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿಯವರು ನಿಧನರಾಗಿರುತ್ತಾರೆ ಎಂದರೆ ಸರಿ. 1 ನೇ ವಾದಿಯವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. 1 ನೇ ವಾದಿಯವರು ಕೆಲಸ ಮಾಡುವ ಸಂದರ್ಭದಲ್ಲಿ ಆಸ್ತಿ ಖರೀದಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ 3 ನೇ ವಾದಿಯವರು ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯವರ ಮತ್ತು ಪ್ರತಿವಾದಿಯವರ ನಡುವೆ ಹಕ್ಕಲು ಬಿಟ್ಟು ಕೊಟ್ಟ ಪತ್ರದ ಬಗ್ಗೆ ಈ ದಾವೆ ಇರುತ್ತದೆ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 2 ಮತ್ತು 3 ನೇ ವಾದಿಯವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**